ಶ್ರೀ ವಾಟಾಳ್ ನಾಗರಾಜ್ : ಅವರು ಲೈಟೇ ಬೇಡವೆಂದು ಹೇಳುತ್ತಿದ್ದಾರೆ.

ಶ್ರೀ ಎಸ್. ಎಂ. ಕೃಷ್ಣ : ಎರಡನೆಯದ್ದು, ಮಾನ್ಯ ವಿರೋಧ ಪಕ್ಷದ ನಾಯಕರು ಕೋರ್ಟಿಗೆ ಹೋಗತಕ್ಕದ್ದು ನೆಪ ಎಂದು ಹೇಳಿದರು. ಅದು ನೆಪ ಅಲ್ಲ. ಕೋರ್ಟಿಗೆ ಹೋದ ಮೇಲೆ, ಅವರು ಸ್ಟೇ-ಆರ್ಡರ್ ಕೊಟ್ಟಮೇಲೆ as a Government, should I abide by the order of stay issued by any court in this country or not?

ಶ್ರೀ ಬಿ. ಎಸ್. ಯಡಿಯೂರಪ್ಪ : ರೆಕಾರ್ಡ್ ತೆಗೆದುನೋಡಿ ಸ್ವಾಮಿ. ಸ್ಟೇ ವೆಕೇಟ್ ಮಾಡುವುದಕ್ಕೆ ಪ್ರಯತ್ನವೇ ಆಗಿಲ್ಲ.

ಶ್ರೀ ಎಂ. ಎಸ್. ಕೃಷ್ಣ : ಮೂರನೆಯದು ಏನೆಂದರೆ, ಈಗಾಗಲೇ ನಮ್ಮ ಮುಖ್ಯಮಂತ್ರಿಗಳು ನಮ್ಮ ಚೀಫ್ ಜಸ್ಟೀಸ್ ಅವರನ್ನು ಭೇಟಿ ಮಾಡಿದ್ದಾರೆ. ಸರ್ಕಾರಕ್ಕೆ ಬರತಕ್ಕಂಥ ರೆವಿನ್ಯೂ ಡ್ಯೂಸ್ ಏನಿವೆ, ಯಾವುದೇ ಇಲಾಖೆಗಳಲ್ಲಾಗಲೀ, ಅದಕ್ಕೆ ನಾವು ಪ್ರಾರ್ಥನೆ ಮಾಡತಕ್ಕದ್ದು ಏನು ಎಂದರೆ ಇದಕ್ಕೆ ಒಂದು ಸ್ಪೆಷಲ್ ಬೆಂಚ್ ಕಾನ್ಸಿಟ್ಯೂಟ್ ಮಾಡಿ ಆದಷ್ಟು ಶೀಘ್ರವಾಗಿ ಈ ಕೇಸ್‌ಗಳನ್ನು one way or the other dispose off ಮಾಡಿದರೆ ಬಹುಶಃ ಈ ಅರಿಯರ್ಸ್ ಸಂಖ್ಯೆ ಕಡಿಮೆ ಆಗುತ್ತದೆ ಎಂದು ನಾನು ಹೇಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ಮಂಡಲ್ ಡ್ಯೂಸ್ ಇದ್ದರೆ, ಹರಿಜನ ಬಸ್ತಿಗಳಿಗೆ ಪವರ್ ಕೊಡುತ್ತಾ ಇಲ್ಲ. ಅದರ ಬಗ್ಗೆ ಹೇಳಿ.

ಶ್ರೀ ಎಸ್. ಎಂ. ಕೃಷ್ಣ : ಇದರ ಬಗ್ಗೆ ಪರಿಶೀಲಿಸುತ್ತೇನೆ.

ವಿಷಯ : ರಾಜ್ಯದಲ್ಲಿ ಹರಿಜನ-ಗಿರಿಜನರಿಗೆ ವಕೀಲರನ್ನಾಗಿ ಸರ್ಕಾರದಲ್ಲಿ ನೇಮಕ.

Q : 754

ಶ್ರೀ ಕರಿಯಣ್ಣ (ಹೊಳಿಹೊನ್ನಾವರ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಎಷ್ಟು ವಕೀಲರನ್ನು ಕೋರ್ಟುಗಳಲ್ಲಿ ಸರ್ಕಾರಿ ವಕೀಲರನ್ನಾಗಿ ನೇಮಕ ಮಾಡಲಾಗಿದೆ?

ಆ) ಅವರಲ್ಲಿ ಹರಿಜನ-ಗಿರಿಜನರ ಸಂಖ್ಯೆ ಎಷ್ಟು?

ಇ) ಹರಿಜನ-ಗಿರಿಜನರಿಗೆ ನೇಮಕ ಮಾಡಲು ಏನು ತೊಂದರೆ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) 98 ಜನ ವಕೀಲರನ್ನು ನೇಮಕಾತಿ ಮಾಡಲಾಗಿದೆ.

ಆ) 05 ಹರಿಜನರು
04 ಗಿರಿಜನರು

ಇ) ಹರಿಜನ ಗಿರಿಜನರನ್ನು ಸರ್ಕಾರಿ ವಕೀಲರನ್ನಾಗಿ ನೇಮಕಾತಿ ಮಾಡಲು ಸಾಕಷ್ಟು ಅರ್ಜಿಗಳನ್ನು ಸಲ್ಲಿಸದೇ ಇರುವುದರಿಂದ ಅವರನ್ನು ಸರ್ಕಾರಿ ವಕೀಲರನ್ನಾಗಿ ನೇಮಕಾತಿ ಮಾಡಲು ಸಾಧ್ಯವಾಗಲಿಲ್ಲ. ಸಾಕಷ್ಟು ಸಂಖ್ಯೆಯಲ್ಲಿ ಸರ್ಕಾರಿ ವಕೀಲರಾಗಿ ನೇಮಕಾತಿ ಬಯಸಿ ಅರ್ಜಿ ಬಂದಲ್ಲಿ ಅವರ ಅರ್ಹತೆಯನ್ನು ಪರಿಶೀಲಿಸಿ ಸರ್ಕಾರ ವಕೀಲರಾಗಿ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೇ, ಸರ್ಕಾರಿ ವಕೀಲರು 98, ಇದರಲ್ಲಿ ಹರಿಜನರು ಕೇವಲ 5 ಜನರು, ಗಿರಿಜನರು 4 ಜನ ಎಂದು ಹೇಳುತ್ತಿದ್ದಾರೆ. ಈ ವಿಚಾರದಲ್ಲಿ ನಿಮಗೆ ಏನಾದರೂ ತೊಂದರೆ ಇದೆಯೇ? ಏಕೆಂದರೆ ಇದರ ಪ್ರಕಾರ, ಇನ್ನೂ 16 ಜನಕ್ಕೆ ನೇಮಕಾತಿ ಮಾಡಬೇಕು? ಏಕೆ ನೇಮಕಾತಿ ಕೊಟ್ಟಿಲ್ಲ, ನಿಮಗೆ ಏನಾದರೂ ತೊಂದರೆ ಇದೆಯೇ ಎಂದು ಕೇಳಿದ್ದೆ, ತೊಂದರೆ ಏನೂ ಇಲ್ಲ. ಆದರೆ ಸಾಕಷ್ಟು, ಸಂಖ್ಯೆಯಲ್ಲಿ ಅರ್ಜಿಗಳು ಬರಲಿಲ್ಲವೆಂದು ಹೇಳಿದ್ದಾರೆ ಮತ್ತು ಕೆಲವು ನಿಯಮಾವಳಿಗಳನ್ನು ಅನುಸರಿಸಬೇಕೆಂದು ಹೇಳುತ್ತಿದ್ದಾರೆ. ಇವರ ಕೋಟಾ ತುಂಬುವುದಕ್ಕೆ ಹಾಲಿ ಏನು ಅರ್ಹತೆ ಇರಬೇಕು, ಇದರಲ್ಲಿ ಏನಾದರೂ ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ ಅರ್ಹತೆಯನ್ನು ಕಡಿಮೆ ಮಾಡುವುದಕ್ಕೆ ಬರುತ್ತದೆಯೇ? ಏಕೆಂದರೆ, ಎಲ್ಲರಿಗೂ ಜನರಲ್ಲಾದ ಅರ್ಹತೆಯನ್ನು ಇಟ್ಟರೆ, ಹರಿಜನ ಗಿರಿಜನರು ಒಬ್ಬರೂ ಸರ್ಕಾರಿ ವಕೀಲರಾಗಿ, ಕೋರ್ಟಿಗೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕಾಗಿ, ಅರ್ಹತೆಯಲ್ಲಿ ಸ್ವಲ್ಪ ಕಡಿಮೆ ಮಾಡುವುದಕ್ಕೆ ಸಾಧ್ಯವೇ, ಇದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಸರ್ಕಾರಿ ವಕೀಲರನ್ನು ನೇಮಕ ಮಾಡುವಾಗ, ಜಿಲ್ಲಾ ನ್ಯಾಯಾಧೀಶರು ಅಂದರೆ ಜಿಲ್ಲಾಧಿಕಾರಿಗಳು ಅರ್ಜಿಗಳನ್ನು ಕರೆಯುತ್ತಾರೆ. ಆ ಅರ್ಜಿಗಳನ್ನು ಪರಿಶೀಲನೆ ಮಾಡಿ ನಮಗೆ ಸಲಹೆಗಳನ್ನು ಕೊಡುತ್ತಾರೆ. ಆ ಸಲಹೆಗಳ ಆಧಾರದ ಮೇಲೆ ನೇಮಕಾತಿ ಮಾಡಬೇಕು. ಇದುವರೆಗೆ ಇರತಕ್ಕ ನಿಯಮಾವಳಿಗಳ ಪ್ರಕಾರ, ನಿಮ್ಮ ವರ್ಗದಿಂದ ಬಂದ ಎಲ್ಲಾ ಅರ್ಜಿದಾರರನ್ನೂ ನೇಮಕ ಮಾಡಿದೆ. ಇವರ ಅರ್ಜಿಗಳು ಸಾಕಷ್ಟು ಬರುತ್ತಾ ಇಲ್ಲ. ಮಾನ್ಯ ಕರಿಯಣ್ಣನವರು ಇವರ ಅರ್ಹತೆಯನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಿದೆಯೇ ಎಂದು ಕೇಳಿದರು. ಇದನ್ನು ಪರಿಶೀಲನೆ ಮಾಡುತ್ತೇವೆ. ಏನು ಮಾಡಿದರೂ ಸಹ ಸರ್ಕಾರದ ಪರವಾಗಿ, ನಿಂತು, ವಾದ ಮಾಡತಕ್ಕ ಶಕ್ತಿ ಬೇಕು. ಏಕೆಂದರೆ, ಕೋಟ್ಯಾವಧಿ ಬಾಕಿ ಇರತಕ್ಕ ವಿಷಯಗಳು ಬಂದು ಸರ್ಕಾರದ ರಕ್ಷಣೆ ಮಾಡತಕ್ಕ ಪ್ರಶ್ನೆ ಇದೆ. ಆದುದರಿಂದ, ಸ್ವಲ್ಪವಾದರೂ ಭಾತಿ ಇರತಕ್ಕವರು, ಕೋರ್ಟಿನಲ್ಲಿ ನಿಂತು ಸರ್ಕಾರದ ಪರವಾಗಿ ಚೆನ್ನಾಗಿ ವಾದ ಮಾಡತಕ್ಕವರನ್ನು ನೇಮಕ ಮಾಡಬೇಕು. ಇಲ್ಲದೇ ಹೋದರೆ, ಸರ್ಕಾರಕ್ಕೆ ಭಾರಿ

ಲುಕ್ಸಾನು ಆಗುವ ಸಂಭವ ಇದೆ. ಅದನ್ನೆಲ್ಲಾ ಪರಿಶೀಲಿಸಿ, ನಿಮ್ಮ ವರ್ಗದವರಿಗೆ ಈಗಿರತಕ್ಕ ಅರ್ಹತೆಯನ್ನು ಏನಾದರೂ ಕಡಿಮೆ ಮಾಡುವುದಕ್ಕೆ ಸಾಧ್ಯವಿದೆಯೇ ಎನ್ನುವುದನ್ನು ವಿಚಾರ ಮಾಡುತ್ತೇವೆ.

ಶ್ರೀ ಕರಿಯಣ್ಣ : ಅವರ ಒಂದು ವಾದವನ್ನು ನಾನು ಒಪ್ಪುವುದಿಲ್ಲ. ಏಕೆಂದರೆ, ಸರ್ಕಾರದಲ್ಲಿ ವಾದ ಮಾಡಬೇಕಾದರೆ, ಬಹಳ ಬುದ್ಧಿವಂತಿಕೆ, ಛಾತಿ ಇರಬೇಕಾಗುತ್ತದೆಂದು ಹೇಳುತ್ತಾರೆ. ನೀವು, ಇವರಿಗೆ ಅವಕಾಶವನ್ನೇ ಕೊಡದೇ ಛಾತಿ ಬೇಕಾಗುತ್ತದೆಂದು ಹೇಳುವುದಕ್ಕಾಗುತ್ತದೆಯೇ? ನೀವು ಇಟ್ಟಿರತಕ್ಕ ನಿಯಮಾವಳಿ ಪ್ರಕಾರ ಎಲ್.ಎಲ್.ಬಿ. ಪಾಸಾದರೆ ಸಾಕು. ಆದರೆ ಮತ್ತೊಂದು ನಿಯಮಾವಳಿ ಮಾಡಿಕೊಂಡು ಇವರಿಗೆ ಅವಕಾಶ ಸಿಕ್ಕುವುದಿಲ್ಲವೆಂದು ಹೇಳಿದರೆ, ಆಗುವುದಿಲ್ಲ. ನೀವು ಅವಕಾಶ ಕೊಟ್ಟು ನೋಡಿ, ನಮ್ಮಲ್ಲಿ. ಅನೇಕ ಉತ್ತಮ ಅಧಿಕಾರಿಗಳು ಇದ್ದಾರೆ. ನೀವೇ ಬಂಗಾರದ ಮೆಡಲ್‌ಗಳನ್ನು ಕೊಟ್ಟಿದ್ದೀರಿ, ಉತ್ತಮವಾದ ನಾನ್ ಅಫಿಷಿಯಲ್ಸ್ ಇದ್ದಾರೆ, ಎಷ್ಟು ಚೆನ್ನಾಗಿ ಕೆಲಸ ಮಾಡಿದ್ದಾರೆ ಎಂಬುದನ್ನು ನೋಡಿದ್ದೀರಿ. ಅದೇ ರೀತಿ ಉತ್ತಮವಾದ ವಕೀಲರು ಇದ್ದಾರೆ. ಆದ್ದರಿಂದ ನೀವು ಅವರಿಗೆ ಅವಕಾಶ ಕೊಡದೆ ಹೇಗೆ ಹೇಳುತ್ತೀರಿ. ಅವರಿಗೆ ಅವಕಾಶ ಕೊಡುವುದಕ್ಕಾಗಿ ಹಾಲಿ ಇರತಕ್ಕ ನಿಯಮಾವಳಿಗಳನ್ನು ಸಡಿಲ ಮಾಡುತ್ತೀರಾ? ನೀವು ಪರಿಶೀಲಿಸುತ್ತೇವೆಂದು ಹೇಳಿದರೆ, ನಮ್ಮ ಜನಾಂಗಕ್ಕೆ ಯಾವುದೂ ಸಿಗುವುದಿಲ್ಲ. ಈಗಾಗಲೇ 40 ವರ್ಷಗಳಾದರೂ ಇನ್ನೂ 20 ಪರ್ಸೆಂಟ್ ತುಂಬುವುದಕ್ಕಾಗುತ್ತಿಲ್ಲ. ಇನ್ನೂ 9 ಪರ್ಸೆಂಟ್‌ನಲ್ಲಿಯೇ ಇದ್ದೇವೆ. ದಯಮಾಡಿ ಸ್ಪಷ್ಟವಾಗಿ ಹೇಳಿ, ದಯವಿಟ್ಟು ನಿಯಮಾವಳಿಯನ್ನು ಸಡಿಲಿಸಿ, ವಕೀಲರಾಗುವುದಕ್ಕೆ ಸಹಾಯ ಮಾಡಿಕೊಡುತ್ತೀರಾ?

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಪರಿಶೀಲಿಸದೇ ಯಾವುದೇ ಕೆಲಸ ಮಾಡುವುದಕ್ಕಾಗುವುದಿಲ್ಲ. ಪರಿಶೀಲಿಸುತ್ತೇವೆಂದರೆ, ಸಹಾನುಭೂತಿಯಿಂದ ಪರಿಶೀಲಿಸುತ್ತೇವೆ. ಈಗ ಎಷ್ಟು ಪರ್ಸೆಂಟೇಜ್ ಇದೆಯೋ ಅಷ್ಟು ಮತ್ತು ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ನೇಮಕ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ವಿಷಯ : ಮರೆನಾಡು ಮತ್ತು ಅಂಬಾರಪುರ ಏತ ನೀರಾವರಿ ಯೋಜನೆ.

ತಡೆ ಹಿಡಿಯಲಾದ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 179 (835)
ಶ್ರೀ ಟಿ. ಬಿ. ಜಯಚಂದ್ರ(ಕಳ್ಳಂಬೆಳ್ಳ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಮರೆನಾಡು ಮತ್ತು ಅಂಬಾರಪುರ ಏತ ನೀರಾವರಿ ಯೋಜನೆಗಳನ್ನು ಡಿ.ಪಿ.ಎ.ಪಿ. ಯೋಜನೆಯ ಅಡಿಯಲ್ಲಿ ಕೈಗೊಂಡಿದ್ದು ಪೂರ್ಣವಾಗದೆ ನಿಂತಿರುವುದು ಸರ್ಕಾರಕ್ಕೆ ತಿಳಿದಿದೆಯೇ?

ಆ) ಈ ಎರಡು ಯೋಜನೆಗಳನ್ನು ಪೂರ್ಣಗೊಳಿಸಲು ಮತ್ತೆ ಬೇಕಾಗಿರುವ